**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾಳಿ</u>**

ಸಿ.ಸಿ ನಂಬರ್.325/2021

ಪಿಯಾರ್ದುದಾರರು ಃ- ರಾಜ್ಯ - ಹೊನ್ನಾಳಿ ಅರಕ್ಷಕ ಠಾಣೆ

ವಿರುದ್ಧ

ಆರೋಪಿಃ- ಶೇಖರಪ್ಪ ಹೆಚ್.ಎಸ್ ಬಿನ್ ಹೊನ್ನಪ್ಪ
47 ವರ್ಷ, ವಾಸ್ಸ ಬಿದರಗಡ್ಡೆ ಗ್ರಾಮ
ಹೊನ್ನಾಳಿ ತಾಲ್ಲುಕು

<u>ಆಪಾದನೆ</u>

ದಿನಾಂಕ 29-12-2020 ರಂದು ಮದ್ಯಾಹ್ನ 2.30 ಗಂಟೆ ಸಮಯದಲ್ಲಿ ಹೊನ್ನಾಳಿ ಪೋಲಿಸ್ ಠಾಣಾ ಸರಹದ್ದಿನ ಕುಂದೂರು ಗ್ರಾಮದ ಅಬುಸಾಲೇಹ ಮತ್ತು ಉಪೇಂದ್ರ ಭಟ್ಟರ ಜಮೀನುಗಳ ಮದ್ಯ ಹಾದು ಹೋಗಿರುವ ಕುಂದೂರು-ಬಸವಪಟ್ಟಣ ರಸ್ತೆಯಲ್ಲಿ ಬಸವಪಟ್ಟಣದ ಕಡೆಯಿಂದ ಚಾಸಾ-4 ಶ್ರೀನಿವಾಸ ಟಿ.ಎಲ್ ರವರು ಚಾಸಾ-1 ಉಮೇಶರವರನ್ನು ಕೆಎ-17-ಹೆಚ್.ಬಿ-9641 ನೇ ಬಜಾಜ್ ಡಿಸ್ಕವರಿ ಬೈಕಿನ ಹಿಂಬದಿಯಲ್ಲಿ ಕೂರಿಸಿಕೊಂಡು ಕುಂದೂರು ಕಡೆ ಹೋಗುತ್ತಿರುವಾಗ , ಆರೋಪಿಯಾದ ನೀವು ಕುಂದುಾರು ಕಡೆಯಿಂದ ಬಸವಪಟ್ಟಣ ಕಡೆಗೆ ಕೆಎ-17-ಡಿ-6320 ನೇ ಮೂರು ಗಾಲಿಯ ಅಪೇ ಗೂಡ್ಸ್ ಆಟೋವನ್ನು ಅತೀವೇಗ ಮತ್ತು ಅಜಾಗರುಕತೆಯಿಂದ ಚಾಲನೆ ಮಾಡಿಕೊಂಡು ಬಂದು ಮುಂದೆ ಹೋಗುತ್ತಿದ್ದ ವಾಹನವನ್ನು ಓವರ್ ಟೇಕ್ ಮಾಡಲು ರಸ್ತೆಯ ಬಲಭಾಗಕ್ಕೆ ಆಟೋವನ್ನು ಚಾಲನೆ ಮಾಡಿಕೊಂಡು ಬಂದು, ಏಕಾಏಕಿ ಆಟೋವನ್ನು ಎಡಭಾಗದ ರಸ್ತೆಗೆ ಚಾಲನೆ ಮಾಡಿದ್ದರಿಂದ ಆಟೋದ ಹಿಂದಿನ ಬಾಡಿಚಾಸಾ-1 ರವರಿಗೆ ಡಿಕ್ಕಿಯಾಗಿರುತ್ತದೆ. ಆ ಮೂಲಕ ಆರೋಪಿಯಾದ ನೀವು ಭಾ .ದಂ. ಸಂ. ಕಲಂ 279 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ

2. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಡಿಕ್ಕಿ ಪಡಿಸಿದ ಪರಿಣಾಮ ಚಾಸಾ-1 ರವರ ಬಲ ಮಂಡಿಗೆ ಪೆಟ್ಟು ಬಿದ್ದು ತೀವ್ರ ಸ್ವರೂಪದ ಗಾಯಪಡಿಸಿರುತ್ತೀರಿ. ಆ ಮೂಲಕ ಆರೋಪಿಯಾದ ನೀವು ಭಾ .ದಂ. ಸಂ. ಕಲಂ 338 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ.

3. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಾಲನ ಪರವಾನಿಗೆ ಇಲ್ಲದೇ ಕೆಎ-17-ಡಿ-6320 ನೇ ಮೂರು ಗಾಲಿಯ ಅಪೇ ಗೂಡ್ಸ್ ಆಟೋವನ್ನು ಚಾಲನೆ ಮಾಡಿರುತ್ತೀರಿ. ಆ ಮೂಲಕ ಆರೋಪಿಯಾದ ನೀವು ಐ ಎಂ ವಿ ಕಲಂ 181 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ .

1. ನಿಮಗೆ ಈಗ ಓದಿ ಹೇಳಿದ ಆಪಾದನೆ ತಿಳಿಯಿತೆ?

ಉತ್ತರಃ

2 ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಉತ್ತರಃ

( ಈ ಮೇಲಿನ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಆತನಿಗೆ ಓದಿ ಹೇಳಿ ಆತನ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು.

**ಸ್ಥಳ** : ಹೊನ್ನಾಳಿ

**ದಿನಾಂಕಃ 01-09-2022**

(ಶ್ರೀ. ಮಂಜುನಾಥ ಆರ್.)

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರು,

ಹೊನ್ನಾಳಿ .